# ಕನ್ನಡ ಪೋಸ್ಟ್

KANNADA POST

ಸಂಪಾದಕ : ಮಂಜು ಬನವಾಸೆ

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 257 | Pages. 2 | Date: 26-08-2025, TUESDAY | RNI NO: KARKAN/2024/89601 | Kannada Daily

ಸಂಪುಟ : 01 – ಸಂಚಿಕೆ : 257 – ಪುಟಗಳು : 2 26-08-2025 ಮಂಗಳವಾರ | Ph: 8762954248 | ದರ : ₹1


# ಮಹಾನಗರ ಪಾಲಿಕೆಗೆ 100 ಕೋಟಿ ರೂ. ಭರವಸೆ

## ವಿಶೇಷ ಸಭೆಯಲ್ಲಿ ಶಾಸಕ ಸ್ವರೂಪ್ ಹೇಳಿಕೆ : ತಾರಕಕ್ಕೇರಿದ ವಾಕ್ಸಮರ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಹಾಸನ: ಮಹಾನಗರ ಪಾಲಿಕೆಗೆ ಸರ್ಕಾರ 100 ಕೋಟಿ ರೂ. ಅನುದಾನ ನೀಡುವ ಭರವಸೆಯನ್ನು ರಾಜ್ಯ ಸರ್ಕಾರ ನೀಡಿದೆ ಎಂದು ಶಾಸಕ ಹೆಚ್.ಪಿ. ಸ್ವರೂಪ್ ಹೇಳಿದರು.

ಮಹಾನಗರ ಪಾಲಿಕೆ ಪ್ರಭಾರ ಮೇಯರ್ ಹೇಮಲತಾ ಚಂದ್ರಶೇಖರ್ ಅವರ ಅಧ್ಯಕ್ಷತೆಯಲ್ಲಿ ಸೋಮವಾರ ಹಮ್ಮಿಕೊಂಡಿದ್ದ ವಿಶೇಷ ಸಭೆಯಲ್ಲಿ ಮಾತನಾಡಿ, ನಗರಸಭೆಯಿಂದ ಮಹಾನಗರ ಪಾಲಿಕೆಯಾಗಿ ಹಾಸನ ಮೇಲ್ದರ್ಜೆಗೆ ಏರಿದೆ. ಮೂಲಸೌಕರ್ಯಕ್ಕಾಗಿ ಸರ್ಕಾರ 200 ಕೋಟಿ ರೂ. ಕೊಡಬೇಕಿತ್ತು. ಆದರೆ ಮೂರು ವರ್ಷಗಳ ಕಾಲ ಹಣ ಬಿಡುಗಡೆ ಅಸಾಧ್ಯವೆಂದು ಹೇಳಿದೆ. ಈ ಸಂಬಂಧ ನಾನು ಮುಖ್ಯಮಂತ್ರಿ, ಸಂಬಂಧಪಟ್ಟ ಸಚಿವರ ಜೊತೆ ಚರ್ಚಿಸಿದ ಬಳಿಕ 100 ಕೋಟಿ ರೂ. ನೀಡುವ ಭರವಸೆ ನೀಡಿದ್ದಾರೆ. ಅಕ್ಟೋಬರ್ ವೇಳೆಗೆ ಸದಸ್ಯರ ಅವಧಿ ಮುಗಿಯುವ ಸಾಧ್ಯತೆಯಿದೆ. ಸುಮ್ಮನೆ ಗೊಂದಲ ಸೃಷ್ಟಿಸುವ ಬದಲು ವಾರ್ಡ್‌ಗಳ ಅಭಿವೃದ್ಧಿಗೆ ಎಲ್ಲರೂ ಸಹಕರಿಸಬೇಕು. ಸದಸ್ಯರಿಗೆ ತಮ್ಮ ತಮ್ಮ ವಾರ್ಡ್‌ಗಳಷ್ಟೇ ಮುಖ್ಯ. ನನಗೆ 35 ವಾರ್ಡ್ ಜೊತೆಗೆ ಈಚೆಗೆ ಸೇರಿರುವ 37 ಹಳ್ಳಿಗಳು ಮುಖ್ಯವಾಗುತ್ತವೆ. ನೀವು ವಾರ್ಡ್‌ನಲ್ಲಿ ಮತ ಕೇಳಿದರೆ ನಾನು ಇಡೀ ಕ್ಷೇತ್ರಕ್ಕೆ ಹೋಗಬೇಕು. ನನ್ನ ಸಾಧನೆ ಏನೆಂದು ಜನರು ಕೇಳಿದರೆ ಉತ್ತರವಿಲ್ಲದಂತಾಗಿದೆ. ಹೀಗಾಗಿ ಇರುವ ಅಲ್ಪ ಅನುದಾನದಲ್ಲಿ ಅಭಿವೃದ್ಧಿ ಮಾಡಬೇಕಿದೆ ಎಂದು ಹೇಳಿದರು.

### ತಾರಕಕ್ಕೇರಿದ ವಾಕ್ಸಮರ

ವಿಶೇಷ ಸಭೆಯು ಶಾಸಕ ಹೆಚ್.ಪಿ. ಸ್ವರೂಪ್ ಹಾಗೂ ಬಿಜೆಪಿ ಸದಸ್ಯ ಮೋಹನ್ ನಡುವೆ ವಾಕ್ಸಮರಕ್ಕೂ ಸಾಕ್ಷಿಯಾಯಿತು. ಸಭೆ ಆರಂಭವಾದಾಗಿನಿಂದಲೂ ಶಾಸಕ ಸ್ವರೂಪ್ ಅವರೇ ಸದಸ್ಯರ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದರು. ಮಧ್ಯ ಪ್ರವೇಶಿಸಿದ ಸದಸ್ಯ ಮೋಹನ್ ಅವರು, ಶಾಸಕರೇ ಮೇಯರ್ ಅವರಿಗೂ ಮಾತನಾಡಲು ಅವಕಾಶ ಕೊಡಿ. ನೀವೊಬ್ಬರೇ ಮಾತನಾಡಿದರೆ ಹೇಗೆ. ಎಲ್ಲರೂ ಹುಟ್ಟುತ್ತ



ಜ್ಞಾನಿಗಳಲ್ಲ. ಅವರು ಹಂತ ಹಂತವಾಗಿ ಕಲಿಯುತ್ತಾರೆಂದರು. ಆಗ ಮೇಯರ್ ಹೇಮಲತಾ ಕೂಡ ಒಂದೆರಡು ಮಾತುಗಳನ್ನಾಡಿ ಸುಮ್ಮನಾದರು. ನಂತರ 15ನೇ ಹಣಕಾಸು ಯೋಜನೆ ಅನುದಾನ ಹಂಚಿಕೆ ಕುರಿತು ಶಾಸಕ ಸ್ವರೂಪ್ ಪ್ರತಿಕ್ರಿಯಿಸುತ್ತಿದ್ದಾಗ ಎದ್ದು ನಿಂತ ಮೋಹನ್, ಶಾಸಕರೇ ನೀವು ಇಲ್ಲಿಗೆ ಕೇವಲ ಸದಸ್ಯರು ಮಾತ್ರ. ಅಧ್ಯಕ್ಷರ ರೀತಿ ಎಲ್ಲದಕ್ಕೂ ಉತ್ತರಿಸಬೇಡಿ. ಸುಮ್ಮನೆ ಕೂತಿರಿ ಎಂದರು. ಅದರಿಂದ ಆಕ್ರೋಶಗೊಂಡ ಶಾಸಕರು, ನನಗೆ ಸುಮ್ಮನೆ ಕೂರುವಂತೆ ಹೇಳಲು ನೀನ್ಯಾರು, ಏನಂತ ಮಾತನಾಡುತ್ತಿದ್ದೀರಿ ಎಂದು ಏಕವಚನದಲ್ಲಿ ಹರಿಹಾಯ್ದಾಗ ಮೋಹನ್ ಸಹ ಗಂಭೀರರಾದರು. ಈ ವೇಳೆ ಜೆಡಿಎಸ್ ಸದಸ್ಯರು ಮೋಹನ್ ಅವರತ್ತ ನುಗ್ಗಿಬಂದು ವಾಗ್ದಾಳಿ ನಡೆಸಿದರು. ಆಗ ಸಭೆ ರಣಾಂಗಣವಾಗಿ ಮಾರ್ಪಟ್ಟಿತು.

ಶಾಸಕ ಸ್ವರೂಪ್ ಮಾತನಾಡಿ, ಸಭೆಯಲ್ಲಿ ಹೇಗಿರಬೇಕೆಂಬುದನ್ನು ಮೊದಲು ಕಲಿಯಿರಿ. ಸಭೆಯ ಅರ್ಥವನ್ನು ಹಾಳು ಮಾಡಬೇಡಿ. ನನಗೆ ಸುಮ್ಮನಿರುವಂತೆ ಹೇಳಲು ನೀವ್ಯಾರು ಎಂದು ಏರುದನಿಯಲ್ಲಿ ತರಾಟೆಗೆ ತೆಗೆದುಕೊಂಡರು. ಜೆಡಿಎಸ್ ಸದಸ್ಯರು ಸಹ, ಅವ್ರು ಎಂಎಲ್‌ಎ ಅವರ ಬಗ್ಗೆ ಏನ್ ಮಾತಾಡ್ತಿದಿರಾ. ಅವರಿಗೆ ಬೆಲೆ ಕೊಡಬೇಕು ಎಂದು ತೀವ್ರ ತರಾಟೆಗೆ ತೆಗೆದುಕೊಂಡರು.

### ಪ್ರೀತಂ ಗೌಡರಿಗೂ ಹೀಗೆ ಆಗಿತ್ತು

ಸದಸ್ಯ ಮೋಹನ್ ಮಾತನಾಡಿ, ಮಾಜಿ ಶಾಸಕ ಪ್ರೀತಂ ಗೌಡ ಅವರಿಗೂ ನೀವು ಹೀಗೆ ಹೇಳಿದ್ದಿರಿ. ಆಗ ಅವರಿಗೆ ಎಷ್ಟು ನೋವಾಗಿತ್ತು ಅಂತ ನಿಮಗೆ ಗೊತ್ತಾ. ಆ ಘಟನೆ ಬಳಿಕ ಅವರು ನಗರಸಭೆಗೆ ಬರಲಿಲ್ಲವೆಂದು ಭಾವುಕರಾದರು. ಕೆಲ ಹೊತ್ತಿನ ಬಳಿಕ ಮೋಹನ್ ಅವರೇ ಮಾತನಾಡಿ, ಶಾಸಕರೇ ನನ್ನನ್ನು ಕ್ಷಮಿಸಿ ಆವೇಶದಲ್ಲಿ ಮಾತನಾಡಿದ್ದೇನೆ. ಮಾತಿನಿಂದ ಯಾರಿಗೆ ನೋವಾಗಿದ್ದರೂ ಕ್ಷಮೆಯಾಚಿಸುತ್ತೇನೆ ಎಂದಾಗ ಪರಿಸ್ಥಿತಿ ತಿಳಿಯಾಯಿತು.

ಸದಸ್ಯ ವಾಸುದೇವ್ ಮಾತನಾಡಿ, ನನ್ನ ವಾರ್ಡ್‌ನಲ್ಲಿ ಇಂಟರ್ ಲಾಕ್ ಅಳವಡಿಕೆಯಲ್ಲಿ ಭಾರೀ ಅಕ್ರಮವಾಗಿದೆ. ಪಾಲಿಕೆ ಇಂಜಿನಿಯರ್‌ಗಳ ಮಾತಿಗೂ



ಬೆಲೆ ಕೊಡದೆ ಗುತ್ತಿಗೆದಾರ ತನಗೆ ಬೇಕಾದವರ ಮನೆ ಮುಂದೆ ಮಾತ್ರ ಕೆಲಸ ಮಾಡಿದ್ದಾನೆ. ಆತನಿಗೆ ಯಾವ ಅಧಿಕಾರಿ ಹಾಗು ಸದಸ್ಯರ ಭಯವಿಲ್ಲ. ಅವನಿಗೆ ಬಿಲ್ ಮಾಡಿಕೊಡದಂತೆ ಎಷ್ಟೇ ಸಲ ಹೇಳಿದರೂ ಪ್ರಯೋಜನವಾಗುತ್ತಿಲ್ಲ. ಚುನಾಯಿತ ಪ್ರತಿನಿಧಿಗೆ ಬೆಲೆಯಿಲ್ಲದ ಈ ಸಭೆಗೆ ಹಾಜರಾಗಿ ಪ್ರಯೋಜನವೇನು ಎಂದು ಸಭೆ ಬಹಿಷ್ಕರಿಸಿ ಹೊರನಡೆಯಲು ಪ್ರಯತ್ನಿಸಿದರು. ಅವರನ್ನು ತಡೆದ ಶಾಸಕ ಸ್ವರೂಪ್, ಸಭೆಯಿಂದ ಅರ್ಧಕ್ಕೆ ತೆರಳಿದರೆ ನಿಮಗೆ ನಷ್ಟ ಹೊರತು ಬೇರೆ ಯಾರಿಗೂ ಅಲ್ಲವೆಂದು ಸಮಾಧಾನಪಡಿಸಿದರು.

ಸದಸ್ಯ ರಕ್ಷಿತ್ ಮಾತನಾಡಿ, ಅನುದಾನ ಹಂಚಿಕೆಯಲ್ಲಿ ತಾರತಮ್ಯ ಮಾಡಲಾಗಿದೆ. ಈಗ 15ನೇ ಹಣಕಾಸು ಯೋಜನೆಯ ವಿಂಗಡಣೆಯಲ್ಲೂ ಮಲತಾಯಿ ಧೋರಣೆ ಅನುಸರಿಸಲಾಗುತ್ತಿದೆ. ಕೆಲವೇ ವಾರ್ಡ್‌ಗಳಿಗೆ ಆದ್ಯತೆ ನೀಡಿದರೆ ನಮ್ಮ ಪರಿಸ್ಥಿತಿ ಏನಾಗಬೇಕು. ಈ ರೀತಿ ತಾರತಮ್ಯ ಮಾಡುವುದಾದರೆ ಪಾಲಿಕೆ ಅನುದಾನ ನಮಗೆ ಬೇಡವೆಂದು ಅಸಮಾಧಾನ ವ್ಯಕ್ತಪಡಿಸಿದರು.

ರಸ್ತೆ ಗುಂಡಿ ಮುಚ್ಚಲು ಹಾಗೂ ಚರಂಡಿ ಕಾಮಗಾರಿಗೆ 2 ಕೋಟಿ ರೂ. ಮೀಸಲಿಡಲಾಗಿದೆ. ಇಷ್ಟು ಕಡಿಮೆ ಹಣದಲ್ಲಿ 35 ವಾರ್ಡ್‌ಗಳಿಗೆ ಎಷ್ಟೆಷ್ಟು ಕೊಡಲು ಸಾಧ್ಯವೆಂದು ಪ್ರಶ್ನಿಸಿದರು. ಅದಕ್ಕೆ ಜೆಡಿಎಸ್ ಸದಸ್ಯರಾದ ಗಿರೀಶ್ ಚನ್ನವೀರಪ್ಪ, ಕ್ರಾಂತಿ, ಸಂತೋಷ್ ಅವರು ದನಿಗೂಡಿಸಿದಾಗ 3 ಕೋಟಿ ರೂ. ಮೀಸಲಿಡಲು ಶಾಸಕ ಸ್ವರೂಪ್ ಪೌರಾಯುಕ್ತರಿಗೆ ಸೂಚಿಸಿದರು.

ಸದಸ್ಯೆ ಸುಜಾತಾ ಮಾತನಾಡಿ, ನಗರದಲ್ಲಿ ಬೀದಿ ನಾಯಿಗಳ ಹಾವಳಿ ಮಿತಿ ಮೀರಿದೆ. ಮಕ್ಕಳು, ಮಹಿಳೆಯರು ಮನೆಯಿಂದ ಹೊರಬರಲು ಭಯಪಡುವಂತಾಗಿದೆ. ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕೆಂದು ಆಗ್ರಹಿಸಿದರು.

ಸಭೆ ಆರಂಭಕ್ಕೂ ಮುನ್ನ ಪೌರ ಕಾರ್ಮಿಕರಿಗೆ ಗೌರಿ-ಗಣೇಶ ಹಬ್ಬದ ಹಿನ್ನಲೆಯಲ್ಲಿ ಬಾಗಿನ ವಿತರಿಸಲಾಯಿತು. ವಿಧಾನ ಪರಿಷತ್ ಸದಸ್ಯ ಡಾ. ಸೂರಜ್ ರೇವಣ್ಣ, ಪೌರಾಯುಕ್ತ ಕೃಷ್ಣಮೂರ್ತಿ, ಅಧಿಕಾರಿಗಳು ಹಾಗು ಚುನಾಯಿತ ಪ್ರತಿನಿಧಿಗಳು ಹಾಜರಿದ್ದರು.

## 3 ಕೋಟಿ ರೂ. ವೆಚ್ಚದ ಕಾಮಗಾರಿಗೆ ಚಾಲನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಬೇಲೂರು : ವಿಶ್ವವಿಖ್ಯಾತವಾದ ಬೇಲೂರು ಕ್ಷೇತ್ರದ ಅಭಿವೃದ್ಧಿಗೆ ರಾಜ್ಯ ಸರ್ಕಾರ ಅನುದಾನ ಕೊಡಲು ಹಿಂದೇಟು ಹಾಕುತಿದ್ದರೂ ಮಾಜಿ ಸಚಿವರಾದ ಬಿ.ಶಿವರಾಮ್‌ರವರು, ಶಾಸಕನಾದ ನನಗೆ ಅನುಭವದ ಕೊರತೆ ಎನ್ನುವ ಮೂಲಕ ಇನ್ನೂ ಅವರು ಚುನಾವಣಾ ಸೋಲಿನಿಂದ ಹೊರಬಾರದೆ ಹತಾಶರಾಗಿದ್ದಾರೆ ಎಂದು ಶಾಸಕ ಎಚ್.ಕೆ.ಸುರೇಶ್ ಹೇಳಿದರು.



ಪಟ್ಟಣದ ಕೆಂಪೇಗೌಡರ ವೃತ್ತದಿಂದ ವಿಷ್ಣು ಸಮುದ್ರ ಕೆರೆವರೆಗಿನ 3 ಕೋಟಿ ರೂ, ರಸ್ತೆ ಕಾಮಗಾರಿಗೆ ಸೋಮವಾರ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಕಳೆದ ಎರಡು ವರ್ಷದಿಂದ ಕ್ಷೇತ್ರದ ಅಭಿವೃದ್ಧಿಗೆ ಅನುದಾನ ಕೊಡಿ ಎಂದು ಪದೇ ಪದೇ ಮಂತ್ರಿಗಳ ಬಳಿಗೆ ಹೋಗಿ ಮನವಿ ಮಾಡಿದರೂ ಪ್ರಯೋಜವಾಗಿಲ್ಲ, ಆದರೆ ಲೋಕೋಯೋಗಿ ಇಲಾಖೆಯಿಂದ ಸ್ವಲ್ಪ ಅನುದಾನ ಹಣ ಬಂದಿದೆ. ಆದರೂ ಕೆಲವರು ಕ್ಷೇತ್ರದ ಅಭಿವೃದ್ಧಿ ಸಹಿಸದೆ ಅನುದಾನಕ್ಕೆ ಅಡ್ಡಗಾಲು ಹಾಕುತ್ತಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಇದ್ದರೂ ಕ್ಷೇತ್ರದ ಅಭಿವೃದ್ಧಿಗೆ ಏಕೆ? ಅನುದಾನ ನೀಡುತ್ತಿಲ್ಲ ಎಂಬ ಬಗ್ಗೆ ಅನುಮಾನ ಕಾಡುತ್ತಿದೆ.

ಪುರಸಭೆಗೆ ಹಿಂದಿನ ಶಾಸಕ ಲಿಂಗೇಶ್ ಅವಧಿಯಲ್ಲಿ ಬಂದ ಹಣವೇ ಕಾರ್ಯಗತವಾಗಿಲ್ಲ. ಇದಕ್ಕೇನು ಕಾರಣ ಎಂಬುದರ ಬಗ್ಗೆ ಉತ್ತರಿಸಲಿ, ಪುರಸಭೆ ವ್ಯಾಪ್ತಿಯಲ್ಲಿ ಅಭಿವೃದ್ಧಿಯಾಗದಿರಲು ಯಾರು ಕಾರಣ ಎಂಬುದು ಜನರಿಗೆ ಗೊತ್ತಿದೆ ಎಂದ ಅವರು ಬೇಲೂರು ಪಟ್ಟಣದ ಕೆಂಪೇಗೌಡ ವೃತ್ತದಿಂದ ವಿಷ್ಣು ಸಮುದ್ರ ಕೆರೆವರೆಗಿನ ರಸ್ತೆ ಗುಂಡಿ ಬಿದ್ದು ಹಾಳಾಗಿತ್ತು.

ಈ ರಸ್ತೆ ಅಭಿವೃದ್ಧಿಗೆ 3 ಕೋಟಿ ರೂ, ನಲ್ಲಿ ಕೆಲಸ ಮಾಡಿಸಲಾಗುವುದು. ಅದಕ್ಕು ಮೊದಲು ಕೆಂಪೇಗೌಡ ರಸ್ತೆ ಅಗಲೀಕರಣವಾಗಲಿದ್ದು, ರಸ್ತೆಯ ಒತ್ತುವರಿದಾರರು ವಿನಾಃ ಕಾರಣ ತೊಂದರೆ ನೀಡದೆ ಒತ್ತುವರಿ ತೆರವುಗೊಳಿಸಿ ರಸ್ತೆ ಅಭಿವೃದ್ಧಿಗೆ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಪುರಸಭೆ ಮಾಜಿ ಅಧ್ಯಕ್ಷ ಎ.ಆರ್.ಅಶೋಕ್ ಮಾತನಾಡಿ, ಶಾಸಕರು ಭ್ರಚಾರ ರಹಿತ ಆಡಳಿತ ನೀಡುತಿದ್ದಾರೆ. ಇದನ್ನು ಸಹಿಸದೆ ಮಾಜಿ ಸಚಿವ ಬಿ.ಶಿವರಾಮ್ ಆರೋಪ ಮಾಡುತ್ತಿದ್ದಾರೆ. ನಾನು ಕೂಡ ಅವರ ಜೇಬಿನಲ್ಲಿದ್ದೆ ಆದರೆ ನನಗೆ ಮೋಸ ಮಾಡಿ ಅಧಿಕಾರದಿಂದ ಇಳಿಸಿದ್ದಾರೆ ಎಂದರು.

ಪುರಸಭೆ ಅಧ್ಯಕ್ಷೆ ಉ?ಾ, ಮುಖ್ಯಾಧಿಕಾರಿ ಬಸವರಾಜು ಶಿಗ್ಗಾವಿ, ಲೋಕೋಪಯೋಗಿ ಇಲಾಖೆ ಎಇಇ ಕೃಷ್ಣೇಗೌಡ, ಪುರಸಭಾ ಮಾಜಿ ಅಧ್ಯಕ್ಷ ಹೆಚ್.ಎಂ..ದಯಾನಂದ್, ಮುಖಂಡರಾದ ರೇಣುಕುಮಾರ್, ಜೆ.ಕೆ.ಕುಮಾರ್. ಸಿ.ಎಸ್.ಪ್ರಕಾಶ್ ಸೇರಿದಂತೆ ಇತರರಿದ್ದರು.

## ಶಾಸಕ ಕೆ.ಎಂ. ಶಿವಲಿಂಗೇಗೌಡ ರಾಜೀನಾಮೆಗೆ ಆಗ್ರಹ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಅರಸೀಕೆರೆ: ತಾಲ್ಲೂಕಿನ ಬಾಣಾವರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯ ವಸತಿಗೆ ನಕಲಿ ಫಲಾನುಭವಿಗಳ ಆಯ್ಕೆ ಮಾಡಿದ್ದು ಭಾರೀ ಗೋಲ್ಮಾಲ್ ನಡೆದಿದೆ. ಹತ್ತಾರು ವರ್ಷಗಳಿಂದ ಭ್ರಷ್ಟರನ್ನು ಸಾಕಿ ಸಲಹುತ್ತಿರುವ ಶಾಸಕ ಕೆ.ಎಂ. ಶಿವಲಿಂಗೇಗೌಡ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ಜೆಡಿಎಸ್ ಮುಖಂಡ ಎನ್. ಆರ್. ಸಂತೋಷ್ ಆಗ್ರಹಿಸಿದರು.



ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ಫಲಾನುಭವಿಗಳನ್ನು ಆಯ್ಕೆ ಮಾಡಲು ಗ್ರಾಮ ಸಭೆ ನಡೆಸಿ ಅರ್ಹರನ್ನು ಆಯ್ಕೆ ಮಾಡಬೇಕು ಎನ್ನುವ ನಿಯಮ ಗಾಳಿಗೆ ತರಲಾಗಿದೆ. ಆದರೆ ಇದೀಗ ಬಾಣಾವರ ಗ್ರಾಪಂ ಪಿಡಿಒ ಹಾಗೂ ತಾಪಂ ಇಒ ಶಾಮೀಲಾಗಿ ನಕಲಿ ಫಲಾನುಭವಿಗಳು ಎಂದು 90 ಜನರ ಆಧಾರ್ ಪಡೆದು ಪಟ್ಟಿ ಮಾಡಿ, ಖಾತೆಗೆ ಮೊದಲ ಕಂತಿನ ಹಣ 30 ಸಾವಿರ ರೂ. ಪಾವತಿಸಲಾಗಿದೆ. ಅಚ್ಚರಿಯ ಸಂಗತಿಯೆಂದರೆ ಉನ್ನತಾಧಿಕಾರಿಗಳ ಲಾಗಿನ್ ಹಾಗೂ ಪಾಸ್‌ವರ್ಡ್ ಕದಿಯಲಾಗಿದೆ. ಇದೀಗ ನಕಲಿ ಫಲಾನುಭವಿಗಳನ್ನು ಸೃಷ್ಟಿಸಿ ಅಂದಾಜು 1.35 ಕೋಟಿ. ರೂ. ಹಣ ಕೊಳ್ಳೆಹೊಡೆಯುವ ಸಂಚು ರೂಪಿಸಿರುವುದು ದಾಖಲೆಗಳಿಂದ ಬಹಿರಂಗವಾಗಿದೆ ಎಂದು ದಾಖಲೆಯ ಪ್ರತಿಗಳನ್ನು ಪ್ರದರ್ಶಿಸಿ ಶಾಸಕರೇ ಬಡಬಗ್ಗರ ಹಣ ತಿಂದು ಹೇಗೆ, ಗೌರಿ, ಗಣೇಶ ಹಬ್ಬ ಮಾಡುತ್ತೀರಿ. ನಿಮಗೆ ನಾಚಿಕೆ ಆಗುವುದಿಲ್ಲವೇ ಎಂದು ವಾಗ್ದಾಳಿ ನಡೆಸಿದರು. ಮನೆಗಳ ಹಂಚಿ ಕೆಲೆ ಮಾಡುವ ಯೋಜನೆಯಲ್ಲಿ ದೊಡ್ಡ ಮಟ್ಟದ ಅವ್ಯವಹಾರ, ಗೋಲ್ಮಾಲ್ ನಡೆದಿದೆ ಎಂದು ಆಳಂದ ಶಾಸಕ, ಮುಖ್ಯಮಂತ್ರಿಗಳ ಆಪ್ತ ಬಿ.ಆರ್. ಪಾಟೀಲ್ ಮಾಡಿದ್ದ ಆರೋಪ ನಿಜವಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಖಾತೆ ಸಚಿವ ಪ್ರಿಯಾಂಕ್ ಖರ್ಗೆ ಇಲಾಖೆಯಲ್ಲಿ ಇಂತಹದ್ದೊಂದು ಬಹುದೊಡ್ಡ ಹಗರಣ ನಡೆದಿದ್ದು ತಪ್ಪಿತಸ್ಥರನ್ನು ಶಿಕ್ಷಿಸಿ ಅಮಾಯಕರಿಗೆ ನ್ಯಾಯ ದೊರಕಿಸಬೇಕು. ಹಗರಣ ಮರೆಮಾಚಲು ಮುಂದಾಗಿರುವ ಅಧಿಕಾರಿಗಳು ನಕಲಿ ಫಲಾನುಭವಿಗಳ ಖಾತೆಗೆ ಜಮೆಯಾಗಿರುವ ಅಂದಾಜು 27 ಲಕ್ಷ ರೂ.ಸರ್ಕಾರಿ ಹಣವನ್ನು ಹಿಂಪಡೆದು ಡಿಡಿ ರೂಪದಲ್ಲಿ ಹಿಂತಿರುಗಿಸಲು ಮುಂದಾಗಿರುವುದು ಗೊತ್ತಾಗಿದೆ. ಹತ್ತಾರು ವರ್ಷಗಳಿಂದ ತಾಲ್ಲೂಕಿನಲ್ಲಿ ಬೀಡುಬಿಟ್ಟಿರುವ ಕೆಲ ಅಧಿಕಾರಿಗಳಿಗೆ ಶಾಸಕ ಕೆ.ಎಂ.ಶಿವಲಿಂಗೇಗೌರ ಶ್ರೀರಕ್ಷೆಯಿದೆ.ಆದ್ದರಿಂದಲೇ ರಾಗಿ, ಮನೆಗಳ ಹಂಚಿಕೆಯಲ್ಲಿ ಕಳ್ಳತನ ಸೇರಿದಂತೆ ಹಲವು ಹಗರಣಗಳ ಸರಮಾಲೆಗಳೇ ಹೊರಬರುತ್ತಿವೆ. ಜಿಲ್ಲಾ ಪಂಚಾಯಿತಿ ಹಾಗೂ ತಾಲೂಕು ಪಂಚಾಯಿತಿ ಚುನಾವಣೆ ಗೆಲ್ಲಲು ವಿವಿಧ ಇಲಾಖೆಗಳಲ್ಲಿ ಕೋಟ್ಯಂತರ ರೂಪಾಯಿ ಕೊಳ್ಳೆ ಹೊಡೆಯಲಾಗುತ್ತಿದೆ. ಕ್ಷೇತ್ರದ ಜನರಿಗೆ ವಾಸ್ತವ ಮನವರಿಕೆ ಮಾಡಿಕೊಡಲು ವಿಧಾನಸಭಾ ಕ್ಷೇತ್ರದ 36 ಗ್ರಾಪಂಗಳ ಕಚೇರಿ ಮುಂಭಾಗವೂ ದೊಡ್ಡಮಟ್ಟದ ಧರಣಿ ನಡೆಸಲಿದ್ದೇವೆ ಎಂದು ಎಚ್ಚರಿಕೆ ನೀಡಿದರು. ಅಧಿಕಾರಿಗಳನ್ನು ಬಳಸಿಕೊಂಡು ಭ್ರಷ್ಟಾಚಾರಕ್ಕೆ ಕುಮ್ಮಕ್ಕು ನೀಡುವ ಜೊತೆಗೆ ಸದನದಲ್ಲಿ ಸಭಾಪತಿಗಳಿಗೆ ಅಗೌರವ ತೋರಿದ ಕೆ.ಎಂ. ಶಿವಲಿಂಗೇಗೌಡ ನೈತಿಕ ಹೊಣೆ ಹೊತ್ತು ರಾಜಿನಾಮೆ ನೀಡಿ ಚುನಾವಣೆ ಎದುರಿಸಲಿ ಎಂದು ಸವಾಲು ಹಾಕಿದರು.

## ಜಿಪಂ ಆವರಣದಲ್ಲಿ ಮಾಸಿಕ ಸಂತೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಹಾಸನ: ಜಿಲ್ಲಾ ಪಂಚಾಯಿತಿ ಆವರಣದಲ್ಲಿ ಇತ್ತೀಚೆಗೆ ಕೌಶಲ್ಯ ಅಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಂಜೀವಿನಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ವತಿಯಿಂದ ಸಂಜೀವಿನಿ ಮಾಸಿಕ ಸಂತೆ ಆಯೋಜಿಸಲಾಗಿತ್ತು.

ಸಂಜೀವಿನಿ ಎನ್‌ಆರ್‌ಎಲ್‌ಎಂ ಯೋಜನೆ ಅಡಿಯಲ್ಲಿ ಸ್ವ-ಸಹಾಯ ಗುಂಪಿನ ಮಹಿಳಾ ಕಿರು ಉದ್ದಿಮೆದಾರರು ತಯಾರಿಸುವ ಆಹಾರ ಉತ್ಪನ್ನಗಳು ಹಾಗು ಇತರ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಸೌಲಭ್ಯ ಕಲ್ಪಿಸುವ ಉದ್ದೇಶವನ್ನು ಈ ಸಂತೆ ಒಳಗೊಂಡಿದೆ. ಇದೆ ವೇಳೆ ಮಾದಕ ವ್ಯಸನ ಮುಕ್ತ ಕರ್ನಾಟಕ ಅರಿವು ಕಾರ್ಯಕ್ರಮ ನಡೆಸಲಾಯಿತು.




ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ, ಉಪಕಾರ್ಯದರ್ಶಿ ಕೃಷ್ಣಮೂರ್ತಿ, ಯೋಜನಾ ನಿರ್ದೇಶಕ ಚಂದ್ರಮೌಳಿ, ಡಾ. ಸುನಿತಾ, ಸ್ವ-ಸಹಾಯ ಗುಂಪಿನ ಮಹಿಳಾ ಸದಸ್ಯರು ಹಾಜರಿದ್ದರು.

## ಟೈಮ್ಸ್ ಶಾಲೆಯಲ್ಲಿ ಕೃಷ್ಣ ಜನ್ಮಾಷ್ಟಮಿ




ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಹಾಸನ: ನಗರದ ವಿಜಯನಗರ ಬಡಾವಣೆಯಲ್ಲಿರುವ ಟೈಮ್ಸ್ ಇಂಟರ್ ನ್ಯಾಷನಲ್ ಶಾಲೆಯಲ್ಲಿ ಈಚೆಗೆ ಪೂರ್ವ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಗೋಕುಲೋತ್ಸವ ಹಮ್ಮಿಕೊಳ್ಳಲಾಗಿತ್ತು. ನಗರದ ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಂಡಿದ್ದ ಕೃಷ್ಣ ಜನ್ಮಾಷ್ಟಮಿ ಕಾರ್ಯಕ್ರಮದಲ್ಲಿ ಪೂರ್ವ ಭಾವಿಯಾಗಿ ಪೋಷಕರಿಗೆ ವಿವಿಧ ಸ್ಪರ್ಧೆ ಏರ್ಪಡಿಸಲಾಗಿತ್ತು. ವೈದ್ಯ ಡಾ. ಆರ್. ನಿಖಿಲ್ ಭಟ್ ಮಾತನಾಡಿ, ವಿದ್ಯಾರ್ಥಿಗಳಿಗೆ ಚಿಕ್ಕವಯಸ್ಸಿನಲ್ಲಿ ಸತ್ವಯುತ ಆಹಾರಗಳ ಸೇವನೆ ಅತಿ ಮುಖ್ಯ ಮಕ್ಕಳು ಪೋಷಕರನ್ನ ಅತಿ ಹೆಚ್ಚು ಅನುಸರಿಸುವುದರಿಂದ ಪೋಷಕರು ಉತ್ತಮ ಹವ್ಯಾಸಗಳನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಟೈಮ್ಸ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಬಿ.ಕೆ. ಗಂಗಾಧರ್ ಮಾತನಾಡಿ, ಚಿಕ್ಕವಯಸ್ಸಿನಿಂದಲೇ ಮಕ್ಕಳನ್ನು ಮೊಬೈಲ್‌ನಿಂದ ದೂರವಿಡಿ, ಮಕ್ಕಳನ್ನು ಆಟವಾಡಲು ಬಿಡಿ, ಅಜ್ಜ-ಅಜ್ಜಿಯರ ಬಾಂಧವ್ಯವನ್ನು ಬೆಳೆಸಿಕೊಳ್ಳುವಂತಹ ಸನ್ನಿವೇಶವನ್ನ ಸೃಷ್ಟಿಸಿ. ಒಳ್ಳೆಯ ಸಂಸ್ಕಾರ ಸಂಸ್ಕೃತಿಯನ್ನು ಚಿಕ್ಕವಯಸಿನಲ್ಲಿ ಬೆಳೆಸುವುದರಿಂದ ಮುಂದಿನ ಭವಿಷ್ಯಕ್ಕೆ ನಾಂದಿಯಾಗುತ್ತದೆ. ಪೋಷಕರ ವರ್ತನೆ ಹವ್ಯಾಸಗಳು ಹಾಗೂ ಅವರ ಹಾವ- ಭಾವಗಳು ಮಾತು ಪ್ರತಿಯೊಂದು ವಿದ್ಯಾರ್ಥಿಗಳ ಮೇಲೆ ಪ್ರಭಾವ ಬೀರುವುದರಿಂದ ನಾವು ಅವರಿಗೆ ಉತ್ತಮ ಮಾರ್ಗದರ್ಶಕರಾಗಿ ಇರಬೇಕು ಎಂದರು. ವೈದ್ಯೆ ಡಾ. ಇಂಪನಾ, ಶಾಲೆಯ ಪ್ರಾಂಶುಪಾಲರಾದ ಬ್ಲೆಸ್ಸಿ ಶಾಮ್ ಹಾಗೂ ಎಲ್ಲಾ ಶಿಕ್ಷಕರು ಹಾಜರಿದ್ದರು.

## ಗಣಪತಿ ಪೆಂಡಾಲ್ ಉದ್ಘಾಟನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಬೇಲೂರು : ಚಿಕ್ಕ ಗ್ರಾಮ. ಕಮ್ಮಿ ಜನಸಂಖ್ಯೆ ಇದ್ದರೂ ಈ ಗ್ರಾಮದಲ್ಲಿ ಗಣೇಶೋತ್ಸವಕ್ಕಾಗಿ ಭವ್ಯ ಕಟ್ಟಡದ ಮಾದರಿಯಲ್ಲಿ ಗಣಪತಿ ಪೆಂಡಾಲ್ ನಿರ್ಮಿಸುವ ಮೂಲಕ ಗುಜ್ಜನಹಳ್ಳಿ ಗ್ರಾಮಸ್ಥರು ಇತರರಿಗೆ ಮಾದರಿಯಾಗಿದ್ದಾರೆ ಎಂದು ಶಾಸಕ ಎಚ್.ಕೆ.ಸುರೇಶ್ ಹೇಳಿದರು.



ತಾಲೂಕಿನ ಅರೇಹಳ್ಳಿ ಹೋಬಳಿ ತುಂಬದೇವನಹಳ್ಳಿ ಗ್ರಾಪಂ ವ್ಯಾಪ್ತಿಯ ಗುಜ್ಜನಹಳ್ಳಿ ಗ್ರಾಮದಲ್ಲಿ ಗಣೇಶೋತ್ಸವಕ್ಕಾಗಿ ನಿರ್ಮಿಸಿರುವ ಗಣಪತಿ ಪೆಂಡಾಲ್ ಸೋಮವಾರ ಉದ್ಘಾಟಿಸಿ ಮಾತನಾಡಿದ ಅವರು, ಸಂಸ್ಕಾರ ಹಾಗೂ ಸಹಬಾಳ್ವೆಯ ಪ್ರತೀಕವಾಗಿ ಗಣಪತಿ ಪೆಂಡಾಲ್ ನಿರ್ಮಿಸಿರುವುದು ಶ್ಲಾಘನೀಯವಾಗಿದೆ. ಇದೇ ರೀತಿ ಗ್ರಾಮವು ವಿನಾಯಕನ ಅನುಗ್ರಹದಿಂದ ಗ್ರಾಮಸ್ಥರೆಲ್ಲರಿಗೂ ಸುಖ ಸಾಂತಿ ನೀಡಿ ಗ್ರಾಮದ ಸರ್ವಾಂಗೀಣ ಅಭಿವೃದ್ಧಿಗೆ ಮುಂದಾಗಲಿ ಎಂದು ಶುಭ ಹಾರೈಸಿದರು.

ಗ್ರಾಮದ ಮುಖಂಡ ಯು.ಪಿ.ಮಲ್ಲೇಶ್ ಮಾತನಾಡಿ, ಕಾಡಾನೆ ಹಾವಳಿ ಹಾಗೂ ಹವಾಮಾನ ವೈಪರೀತ್ಯದಿಂದ ನಷ್ಟ ಅನುಭವಿಸುತ್ತಿರುವುದರ ನಡುವೆಯೂ ಗ್ರಾಮಸ್ಥರು ದಾನಿಗಳ ಹಾಗೂ ಗ್ರಾಮ ಪಂಚಾಯಿತಿಯ ಅಲ್ಪ ಅನುದಾನ ಸೇರಿದಂತೆ ಗ್ರಾಮಸ್ಥರೇ ನೀಡಿದ ಹಣಕಾಸಿನ ನೆರವಿನಿಂದಾಗಿ 14 ಲಕ್ಷ ರೂ, ವೆಚ್ಚದಲ್ಲಿ ಗಣಪತಿ ಪೆಂಡಾಲ್ ನಿರ್ಮಿಸಲಾಗಿದೆ ಎಂದರು.

ತುಂಬದೇವನಹಳ್ಳಿ ಗ್ರಾಪಂ ಅಧ್ಯಕ್ಷ ಯೋಗೇಶ್, ವಿದ್ಯಾ ಗಣಪತಿ ಸೇವಾ ಸಮಿತಿ ಅಧ್ಯಕ್ಷ ಶೇಖರ್ ಪೂಜಾರಿ, ಮುಖಂಡರಾದ ಶಿವಾನಂದ, ತುಳಸಿದಾಸ್, ಅಮಿತ್ ಶೆಟ್ಟಿ ಸೇರಿದಂತೆ ಇತರರಿದ್ದರು.

